# ಅವರೇ ಬೆಳಕು, ಅವರೇ ಭವಿಷ್ಯ

ಭಾರತ ಹಾಗೂ ಚೀನಾದಲ್ಲಿ 'ಮಿಲೇನಿಯಲ್ಸ್' ಸಂಖ್ಯೆ ಹೆಚ್ಚಾಗುತ್ತಿದೆ. ವಿಶ್ವದಾದ್ಯಂತ ಇರುವ ಜನಸಂಖ್ಯೆಯ ಶೇ. 47ರಷ್ಟು ಹುಟ್ಟಿರುವುದು 2000 ಇಸವಿಯ ನಂತರ ಎಂದು ಅಧ್ಯಯನವೊಂದು ಹೇಳಿದೆ. 2020ರ ಹೊತ್ತಿಗೆ ಭಾರತ ಇಡೀ ಜಗತ್ತಿನಲ್ಲೇ ಅತಿ ಹೆಚ್ಚು ಯುವಜನರನ್ನು ಒಳಗೊಂಡ ದೇಶ ಎನಿಸಿಕೊಳ್ಳಲಿದೆ. ಹೀಗಾಗಿ ಭವಿಷ್ಯ ಯುವಜನತೆಯ ಪ್ರಗತಿಯನ್ನೇ ಅವಲಂಬಿಸಿದೆ.

ಎರಡು ಹಾಗೂ ಮೂರನೇ ತಲೆಮಾರಿನ ಹುಡುಗ–ಹುಡುಗಿಯರು ಆರ್ಥಿಕ ಸುಭಿಕ್ಷ ವಾತಾವರಣದಲ್ಲಿ ಹೆಚ್ಚಾಗಿ ಬೆಳೆದಿರುತ್ತಾರೆ. ನಮಗೆ ಚೆನ್ನಾಗಿ ಓದಿ, ಒಂದು ಸುಭದ್ರ ಕೆಲಸ ಹಿಡಿದು ಭವಿಷ್ಯ ರೂಪಿಸಿಕೊಳ್ಳುವುದು ಆದ್ಯತೆ ಆಗಿತ್ತು. ಇಂದಿನವರ ಆದ್ಯತೆ ಬದಲಾಗಿದೆ.

ಇಂಟರ್ನೆಟ್, ಗ್ಯಾಡ್ಜೆಟ್‌ಗಳ ಜೊತೆಜೊತೆಗೇ ಬೆಳೆದಿರುವ ಅವರಿಗೆ ಅವುಗಳ ಜ್ಞಾನ ಸಹಜವಾಗಿಯೇ ಸಿಕ್ಕಿದೆ. ನಾವಾದರೆ ಅದನ್ನು ಹೊಸದಾಗಿ ಕಲಿತು ನಮ್ಮದಾಗಿಸಿಕೊಂಡೆವು. ಹೀಗಾಗಿ ಅವನ್ನು ಹೊಸಕಾಲದ ಜರೂರಿಗೆ ಒಗ್ಗಿಸಿಕೊಳ್ಳುವಲ್ಲಿ ಅವರು ಸದಾ ಮುಂದಿರುತ್ತಾರೆ. ಡಿಜಿಟಲ್ ವ್ಯಸನಿಗಳು ಅವರಾದರೂ ಅದರ ಸಕಾರಾತ್ಮಕ ಆಯಾಮವನ್ನು ನಿರ್ಲಕ್ಷಿಸಕೂಡದು. ಇದು ಡಿಜಿಟಲ್ ವರ್ಲ್ಡ್ ಆಗಿರುವುದರಿಂದ ಅವರ ವ್ಯಸನ ಕೂಡ ಒಪ್ಪಿತ ಜ್ಞಾನಶಾಖೆಯೇ ಹೌದಲ್ಲವೇ?

ಜಾಗತಿಕ ಮಟ್ಟದಲ್ಲಿ ಏನೇನು ನಡೆಯುತ್ತಿದೆ ಎನ್ನುವುದನ್ನು ಹೊಸ ಪೀಳಿಗೆ ಬೇಗ ತಿಳಿಯುತ್ತಿದೆ. ತಮ್ಮ ಆಸಕ್ತಿಯ ಕ್ಷೇತ್ರವನ್ನು ವೃತ್ತಿಗೆ ಅನ್ವಯಿಸಿಕೊಳ್ಳುವ ಗುರಿ ಅವರದ್ದು. ಹೀಗಾಗಿ ಈ ನಿಟ್ಟಿನಲ್ಲಿ ಲಭ್ಯವಿರುವ ಆಯ್ಕೆಗಳ ಅರಿವೂ ಅವರಿಗೆ ಚೆನ್ನಾಗಿಯೇ ಇದೆ.

ಇನ್ನು ಹಳಹಳಿಕೆಯ ವಿಷಯ. ಅವರಿಗೆ ಬೇರೆಯವರ ಬಗೆಗೆ ಚಿಂತೆ ಇಲ್ಲ, ಸಾಮಾಜಿಕ ಹೊಣೆಗಾರಿಕೆ ಇಲ್ಲ ಎನ್ನುವ ಆರೋಪಗಳನ್ನು ಸಾಮಾನ್ಯೀಕರಿಸುವುದೇ ತಪ್ಪು. ಸಂಶೋಧನೆಗಳು ಹೇಳುವಂತೆ ಹೊಸ ಪೀಳಿಗೆಯವರಲ್ಲಿ ಸಾಮಾಜಿಕ ಸೇವೆ ಮಾಡುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಎಷ್ಟೋ ಜನ ಒಂದಿಷ್ಟು ವರ್ಷಗಳ ಕಾಲ ಸಂಪಾದನೆ ಮಾಡಿದ ಮೇಲೆ ಸಮಾಜಕ್ಕೆ ಯಾವ ಯಾವುದೋ ರೂಪದಲ್ಲಿ ಮರುಪೂರೈಸಲು ಮುಂದಾಗುತ್ತಿದ್ದಾರೆ.

ತಮ್ಮ ಆಸಕ್ತಿಗೆ ನೀರೂಡಿಸಿಕೊಳ್ಳುವುದರಲ್ಲೂ ಅವರ ಧೋರಣೆ ಅನುಕರಣೀಯ. ಕ್ರೀಡೆಯಲ್ಲಿ ಆಸಕ್ತಿ ಇರುವವರು ಓದಿಗೆ ಪೂರ್ಣವಿರಾಮ ಹಾಕಿ, ಸಾಧನೆಯ ಮೆಟ್ಟಿಲು ಹತ್ತಿದ ಮೇಲೆ ಮತ್ತೆ ಓದನ್ನು ಮುಂದುವರಿಸುವುದನ್ನು ಕಾಣಬಹುದು. ಇವೆಲ್ಲ ಕೆಲವು ಉದಾಹರಣೆಗಳಷ್ಟೆ. ಕಣ್ಣಗಲಿಸಿ ನೋಡಿದರೆ ಇನ್ನಷ್ಟು ಒಳಿತುಗಳು ಇಣುಕಿಯಾವು.

ನಮ್ಮ ಶಿಕ್ಷಣ ವ್ಯವಸ್ಥೆ ಒತ್ತಡದ ಕತ್ತಿ ಅಲಗಿನ ಮೇಲೆ ಮಕ್ಕಳು ನಡೆಯುವಂತೆ ಮಾಡಿರುವುದು ನಿಜ. ಸ್ಪರ್ಧೆಯಲ್ಲಿ ಹಿಂದುಳಿದರೆ ತಂತಾನೇ ಆತಂಕದ ಮೋಡ ಕವಿಯುವಂತಹ ವ್ಯವಸ್ಥೆ ಇದೆ. ಇದು ವಿಕಾಸ, ಸೃಜನಶೀಲತೆಯ ಹೊಸ ಮಾರ್ಗಗಳನ್ನು ಶಿಕ್ಷಣದಲ್ಲಿ ತರಬೇಕಾದ ಅಗತ್ಯವನ್ನು ಹೇಳುತ್ತಿದೆ. ಇದು ಸಾಧ್ಯವಾದಲ್ಲಿ ಹೊಸ ಪೀಳಿಗೆಯ ಕೈಯಲ್ಲಿನ ದೀಪಗಳ ಬೆಳಕು ಇನ್ನೂ ಜೋರಾಗುತ್ತದೆ.

ಡಿಜಿಟಲ್ ವ್ಯಸನಕ್ಕೆ ಮಕ್ಕಳು ಬೀಳುವುದರಲ್ಲಿ ಪೋಷಕರ ಪಾತ್ರವೂ ಇದೆ. ಅಳುವ ಮಗುವನ್ನು ಯೂಟ್ಯೂಬ್ ವಿಡಿಯೊ ನೋಡಲು ಹಚ್ಚಿ, ಸಮಾರಂಭದಲ್ಲಿ ಮಗು ಕಿರಿಕಿರಿ ಮಾಡದೇ ಇರಲಿ ಎಂದು ಮೊಬೈಲ್ ಕೈಗಿತ್ತು ಸುಮ್ಮನಾಗುವವರು ಪೋಷಕರೇ ಅಲ್ಲವೇ? ಅವರು ಹೊಸ ಪೀಳಿಗೆಯ ಜತೆಗೆ ಈ ಎಲ್ಲ ವಿಷಯಗಳಲ್ಲೂ ಹೆಜ್ಜೆ ಹಾಕಬೇಕು. ಆಗ ಮಿಲೇನಿಯಲ್‌ಗಳ ಮನೋಬಲದ ನಿಜ ಹೊಳಪು ಸಾಧ್ಯ.

– ಡಾ. ಪ್ರೀತಿ ಪೈ

GENERATION Y

